**ಕರ್ನಾಟಕ ಸರ್ಕಾರ**

**ಕರ್ನಾಟಕ ರಾಜ್ಯ ಸಹಕಾರ ಚುನಾವಣಾ ಆಯೋಗ**

ಕರ್ನಾಟಕ ರಾಜ್ಯ ಸಹಕಾರ ವಸತಿ ಮಹಾಮಂಡಳದ ಕಟ್ಟಡ,
ನಂ.3, 2ನೇ ಮಹಡಿ, ಕರಿಯಪ್ಪ ರಸ್ತೆ,
ಬಸವನಗುಡಿ (ಕೃಷ್ಣರಾವ್ ಪಾರ್ಕ್ ಮುಂಭಾಗ)
ಬೆಂಗಳೂರು–560004 ದಿನಾಂಕ:17.10.2013

**ವಿಷಯ:–** ದಿನಾಂಕ:31.03.2014ಕ್ಕೆ ಮಂಡಲಿಗಳ ಪದಾವಧಿ ಮುಗಿಯಲಿರುವ ಪ್ರಾಥಮಿಕ ಸಹಕಾರ ಸಂಘಗಳ / ಸೌಹಾರ್ಧ ಸಹಕಾರಿಗಳ ಆಡಳಿತ ಮಂಡಳಿ/ ಪದಾಧಿಕಾರಿಗಳ ಚುನಾವಣೆ ನಡೆಸುವ ಸಂಬಂಧ ಜಿಲ್ಲಾ ಚುನಾವಣಾಧಿಕಾರಿಗಳ ನೇಮಕ ಮಾಡುವ ಕುರಿತು.

***

**ಪ್ರಸ್ತಾವನೆ:–**

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ರ (ಸಂಕ್ಷಿಪ್ತವಾಗಿ 'ಅಧಿನಿಯಮ') ಪ್ರಕರಣ 39–ಎ ಹಾಗೂ ಪ್ರಕರಣ 39–ಎಎ ಹಾಗೂ ಕರ್ನಾಟಕ ಸೌಹಾರ್ಧ ಸಹಕಾರಿ ಅಧಿನಿಯಮ, 1997 ರ (ಸಂಕ್ಷಿಪ್ತವಾಗಿ ಸೌಹಾರ್ಧ ಸಹಕಾರಿ ಅಧಿನಿಯಮ) ಪ್ರಕರಣ 26 ಮತ್ತು 26ಎ ಗಳ ಅವಕಾಶದಂತೆ ಯಾವುದೇ ಆಕಸ್ಮಿಕ ಖಾಲಿ ಸ್ಥಾನವನ್ನು ಒಳಗೊಂಡಂತೆ ಸಹಕಾರ ಸಂಘದ / ಸೌಹಾರ್ಧ ಸಹಕಾರಿಯ ಮಂಡಲಿಯ ಸದಸ್ಯರ ಪ್ರತಿಯೊಂದು ಸಾಮಾನ್ಯ ಚುನಾವಣೆಯನ್ನು ಮತ್ತು ಪದಾಧಿಕಾರಿಗಳ ಚುನಾವಣೆಯನ್ನು ಸಹಕಾರ ಚುನಾವಣಾ ಆಯೋಗದ ಅಧೀಕ್ಷಣೆ, ನಿರ್ದೇಶನ ಮತ್ತು ನಿಯಂತ್ರಣಕ್ಕೆ ಒಳಪಟ್ಟು ನಡೆಸತಕ್ಕದ್ದಾಗಿದೆ. ಮೇಲೆ ತಿಳಿಸಿದಂತೆ ಸಹಕಾರ ಸಂಘದ / ಸಹಕಾರಿಯ ಮಂಡಲಿ ಚುನಾವಣೆಗಳನ್ನು / ಪದಾಧಿಕಾರಿಗಳ ಚುನಾವಣೆಗಳನ್ನು ಸದರಿ ಅಧಿನಿಯಮ / ನಿಯಮಗಳು ಹಾಗೂ ಸಂಘಗಳ /ಸಹಕಾರಿಗಳ ಉಪವಿಧಿಗಳನ್ನು ಗಮನದಲ್ಲಿಟ್ಟುಕೊಂಡು ಕಾನೂನಿಗೆ ಅನುಗುಣವಾಗಿ ನಡೆಸತಕ್ಕದ್ದಾಗಿದೆ. 2013ರ ಮಾರ್ಚ್ ಮತ್ತು ಏಪ್ರಿಲ್ ತಿಂಗಳಲ್ಲಿ ನಡೆಯಬೇಕಾಗಿರುವ ಮಂಡಲಿ ಚುನಾವಣೆಗಳು ಮತ್ತು ತತ್ಪರಿಣಾಮದ ಪದಾಧಿಕಾರಿಗಳ ಚುನಾವಣೆಗಳನ್ನು ಅಧಿನಿಯಮ ಪ್ರಕರಣ 39ಎ, ಸೌಹಾರ್ಧ ಸಹಕಾರಿ ಅಧಿನಿಯಮ ಪ್ರಕರಣ 26, 26ಎ ಗಳ ಅವಕಾಶದಂತೆ ನಡೆಸುವ ಸಂಬಂಧ ಈಗಾಗಲೇ ಆಯೋಗವು ಅಗತ್ಯ ಕ್ರಮ ಕೈಗೊಂಡಿರುತ್ತದೆ. 2014ನೇ ಮಾರ್ಚ್ ಅಂತ್ಯಕ್ಕೆ ಮಂಡಲಿಯ ಅವಧಿ ಮುಕ್ತಾಯವಾಗುವ ಸಹಕಾರ ಸಂಘಗಳಿಗೆ ಸಂಬಂಧಿಸಿದಂತೆ ಮಂಡಲಿ ಸದಸ್ಯರ ಸಾಮಾನ್ಯ ಚುನಾವಣೆ ಮತ್ತು ತತ್ಪರಿಣಾಮ ಪದಾಧಿಕಾರಿಗಳ ಚುನಾವಣೆಗಳನ್ನು ನಡೆಸುವ ಬಗ್ಗೆ ಮತದಾರರ ಪಟ್ಟಿಯ ತಯಾರಿಕೆಗಾಗಿ ಮತ್ತು ಚುನಾವಣೆಗಳನ್ನು ನಡೆಸುವುದಕ್ಕಾಗಿ ಪೂರ್ವಸಿದ್ಧತಾ ಕಾರ್ಯವನ್ನು ಪ್ರಾರಂಭಿಸಬೇಕಾಗಿರುತ್ತದೆ. ಪ್ರತಿಯೊಂದು ಸಹಕಾರ ಸಂಘದ ಮಂಡಲಿಯು ತನ್ನ ಪದಾವಧಿಯು ಮುಕ್ತಾಯವಾಗುವ ದಿನಾಂಕಕ್ಕೆ ಹಿಂದಿನ ಕನಿಷ್ಟ ಆರು ತಿಂಗಳಿಗೆ ಮುಂಚೆ ಸಹಕಾರಿ ಚುನಾವಣಾ ಆಯೋಗಕ್ಕೆ ತಿಳಿಸತಕ್ಕದ್ದಾಗಿದೆ.

ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ನಿಯಮಗಳು, 2013 ರ ನಿಯಮ 13ಡಿ ಮತ್ತು ಕರ್ನಾಟಕ ಸೌಹಾರ್ಧ ಸಹಕಾರಿ ನಿ., (ತಿದ್ದುಪಡಿ) ನಿಯಮಗಳು 2013ರ ನಿಯಮ 5ಬಿ(3)ರ ಅವಕಾಶದಂತೆ ಜಿಲ್ಲಾ ಚುನಾವಣಾಧಿಕಾರಿಯು ಕೂಲಂಕುಷ ಪರಿಶೀಲನೆಯ ನಂತರ, ಆಡಳಿತ ಮಂಡಲಿಗಳಿಗೆ ಪದಾವಧಿ ಮುಕ್ತಾಯವಾಗುವ 120 ದಿನಗಳ ಪೂರ್ವದಲ್ಲಿ (i) ಸಹಕಾರ ಸಂಘದ /ಸಹಕಾರಿಯ ಹೆಸರು ಮತ್ತು ವಿಳಾಸ (ii) ಮಂಡಲಿಗೆ ಆಯ್ಕೆಯಾಗಬೇಕಾಗಿರುವ ನಿರ್ದೇಶಕರ ಸಂಖ್ಯೆ (iii) ಮಂಡಲಿ ಪದಾವಧಿ ಮುಕ್ತಾಯವಾಗುವ ದಿನಾಂಕ (iv) ಚುನಾವಣೆಗಳನ್ನು ನಡೆಸಬಹುದಾದ ಸ್ಥಳ ಹಾಗೂ ಚುನಾವಣಾ ಆಯೋಗಕ್ಕೆ ಅವಶ್ಯವಿರುವ ಇತರೆ ಮಾಹಿತಿಗಳನ್ನು ಒಳಗೊಂಡ, ಚುನಾವಣೆಗಳು ಸನ್ನಿಹಿತವಾಗಿರುವ ಎಲ್ಲಾ ಸಹಕಾರ ಸಂಘಗಳ /ಸಹಕಾರಿಗಳ ಕ್ರೋಢೀಕೃತ ಪಟ್ಟಿಯನ್ನು ಕಳುಹಿಸತಕ್ಕದ್ದಾಗಿದೆ. ಈ ಹಿನ್ನೆಲೆಯಲ್ಲಿ ಜಿಲ್ಲಾವಾರು ಜಿಲ್ಲಾ ಚುನಾವಣಾಧಿಕಾರಿಗಳನ್ನು ನೇಮಿಸುವ ಅಗತ್ಯವಿರುತ್ತದೆ.

ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ನಿಯಮಗಳು 2013ರ ನಿಯಮ 2(i-1) ಹಾಗೂ ಕರ್ನಾಟಕ ಸೌಹಾರ್ಧ ಸಹಕಾರಿ (ತಿದ್ದುಪಡಿ) ನಿಯಮಗಳು, 2013ರ ನಿಯಮ 2(ಜಿ–2) ಗಳ ಅವಕಾಶಗಳಂತೆ ಜಿಲ್ಲಾ ಚುನಾವಣಾಧಿಕಾರಿಯನ್ನು ನೇಮಿಸುವ ಅಧಿಕಾರ /ಜವಾಬ್ದಾರಿಯು ಸಹಕಾರ ಚುನಾವಣಾ ಆಯೋಗದ್ದಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಮೊದಲ ಹಂತದಲ್ಲಿ ಪ್ರಾಥಮಿಕ ಸಹಕಾರ ಸಂಘಗಳು/ ಸಹಕಾರಿಗಳ ಮಂಡಲಿಗಳ ಸಾಮಾನ್ಯ ಚುನಾವಣೆ ಮತ್ತು ತತ್ಪರಿಣಾಮದ ಪದಾಧಿಕಾರಿಗಳ ಚುನಾವಣೆಯನ್ನು ನಡೆಸುವ ಬಗ್ಗೆ ಜಿಲ್ಲಾ ಚುನಾವಣಾಧಿಕಾರಿಗಳನ್ನು ನೇಮಿಸುವ ಉದ್ದೇಶ ಹೊಂದಿದ್ದು ಈ ಸಂಬಂಧ ಕೆಳಕಂಡ ಆದೇಶ ಹೊರಡಿಸಲಾಗಿದೆ.

(ಮುದ್ರೆ: ಸಹಕಾರ ಚುನಾವಣಾ ಆಯೋಗ, ಆಯುಕ್ತರು, ಬೆಂಗಳೂರು)

**–:ಆದೇಶ:–**

**ಸಚುಆ/30/ಜಿಚುಅನೇ–2014/ಪ್ರಾಸಂ/2013** **ದಿನಾಂಕ:17.10.2013**

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ನಿಯಮಗಳು 2013ರ ನಿಯಮ 2(i–1) ಹಾಗೂ ಕರ್ನಾಟಕ ಸೌಹಾರ್ಧ ಸಹಕಾರಿ (ತಿದ್ದುಪಡಿ) ನಿಯಮಗಳು 2013ರ ನಿಯಮ

----2

2(ಜಿ-2)ರಂತೆ ಸಹಕಾರ ಚುನಾವಣಾ ಆಯೋಗಕ್ಕೆ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಶ್ರೀ ಎನ್.ಸಿ. ಮುನಿಯಪ್ಪ, ಕರ್ನಾಟಕ ರಾಜ್ಯದ ಸಹಕಾರ ಚುನಾವಣಾ ಆಯುಕ್ತನಾದ ನಾನು ರಾಜ್ಯದ ಎಲ್ಲಾ ಜಿಲ್ಲೆಗಳ ಸಹಕಾರ ಸಂಘಗಳ ಉಪನಿಬಂಧಕರನ್ನು, ಪ್ರಾಥಮಿಕ ಸಹಕಾರ ಸಂಘಗಳ / ಸಹಕಾರಿಗಳಿಗೆ ಮಂಡಲಿ ಚುನಾವಣೆ, ಮತ್ತು ತತ್ಪರಿಣಾಮದ ಪದಾಧಿಕಾರಿಗಳ ಚುನಾವಣೆಗಳಿಗೆ ಸಂಬಂಧಿಸಿದಂತೆ ಆಯಾ ಜಿಲ್ಲೆಯ ಜಿಲ್ಲಾ ಚುನಾವಣಾಧಿಕಾರಿಯನ್ನಾಗಿ ಮುಂದಿನ ಆದೇಶದವರೆಗೆ ನೇಮಿಸಿರುತ್ತೇನೆ. ಜಿಲ್ಲಾ ಚುನಾವಣಾಧಿಕಾರಿಗಳು, ಸಹಕಾರ ಸಂಘಗಳು /ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರು ಸಲ್ಲಿಸಿದ ಮತದಾರರ ಪಟ್ಟಿಯನ್ನು ಸಂಬಂಧಿಸಿದ ದಾಖಲಾತಿಗಳೊಂದಿಗೆ ಪರಿಶೀಲಿಸಿ ಸಿದ್ದಪಡಿಸಲು ಹಾಗೂ ಮತನೀಡುವ ಹಕ್ಕುಳ್ಳ /ಸುಸ್ತಿದಾರರ ಹಾಗೂ ಸುಸ್ತಿಯಾಗುವವರ ಕರಡು ಪಟ್ಟಿಯನ್ನು ಚುನಾವಣಾ ದಿನಾಂಕಕ್ಕೆ ಕನಿಷ್ಟ 45 ದಿನಗಳ ಮುಂಚಿತವಾಗಿ ಪ್ರಕಟಿಸಿ, ಆಕ್ಷೇಪಣೆ ಕರೆಯುವುದು, ಅಂತಿಮ ಮತದಾರರ ಪಟ್ಟಿಯನ್ನು ಚುನಾವಣಾ ದಿನಾಂಕಕ್ಕೆ 15 ದಿನಗಳ ಪೂರ್ವದಲ್ಲಿ ಪ್ರಕಟಿಸುವುದರ ಕುರಿತು ಅಗತ್ಯ ಕ್ರಮವಿಡತಕ್ಕದ್ದು. ಪ್ರತಿ ಸಹಕಾರ ಸಂಘದ /ಪ್ರತಿ ಸಹಕಾರಿಯ ಮತ ನೀಡುವ ಹಕ್ಕುಳ್ಳ ಸದಸ್ಯರ ಕರಡು ಅರ್ಹತಾಪಟ್ಟಿ, ಸುಸ್ತಿದಾರರ ಕರಡು ಪಟ್ಟಿ ಹಾಗೂ ಮತದಾನದ ಹಕ್ಕನ್ನು ಹೊಂದಿರದ ಇತರ ಸದಸ್ಯರ ಕರಡು ಪಟ್ಟಿಗಳನ್ನು ಹಾಗೂ ಮತದಾರರ ಅಂತಿಮ ಪಟ್ಟಿ ಮತ್ತು ಚುನಾವಣಾ ವೇಳಾಪಟ್ಟಿಗಳನ್ನು ಸಂಬಂಧಪಟ್ಟ ಸಹಕಾರ ಸಂಘ / ಸಹಕಾರಿಯ ಸೂಚನಾಫಲಕದಲ್ಲಿ ಹಾಗೂ ಸಹಕಾರ ಇಲಾಖೆಯ ಸ್ಥಳೀಯ ಅಧಿಕಾರಿಯ ಸೂಚನಾಫಲಕದಲ್ಲಿ ಪ್ರಕಟಿಸತಕ್ಕದ್ದು. ಅಲ್ಲದೇ ಜಿಲ್ಲಾ ಚುನಾವಣಾಧಿಕಾರಿಗಳು ಸಹಾಯಕ ಚುನಾವಣಾಧಿಕಾರಿಗಳ ನೆರವಿನೊಂದಿಗೆ ಅನುಬಂಧದಲ್ಲಿ ಸೂಚಿಸಿರುವ ನಿರ್ದೇಶನ ಮತ್ತು ಮಾರ್ಗಸೂಚಿಗಳನ್ನು ತಪ್ಪದೇ ಪಾಲಿಸಲು ಆದೇಶಿಸಿದೆ.

ಸಹಕಾರ ಚುನಾವಣಾ ಆಯೋಗ ಆಯುಕ್ತರು ಬೆಂಗಳೂರು

(ಎನ್.ಸಿ. ಮುನಿಯಪ್ಪ)
ಸಹಕಾರ ಚುನಾವಣಾ ಆಯುಕ್ತರು

ಸಹಕಾರ ಸಂಘಗಳ ಉಪನಿಬಂಧಕರು,
----------------------ಜಿಲ್ಲೆ
----------------------

**ಪ್ರತಿಗಳು:-**

1. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಹಕಾರ ಇಲಾಖೆ, 6ನೇ ಅಂತಸ್ತು, ಬಹುಮಹಡಿ ಕಟ್ಟಡ, ಬೆಂಗಳೂರು-560 001.
2. ಸಹಕಾರ ಸಂಘಗಳ ನಿಬಂಧಕರು, ನಂ.1 ಅಲಿ ಆಸ್ಕರ್ ರಸ್ತೆ, ಬೆಂಗಳೂರು- 560 052
3. ಸಹಕಾರ ಸಂಘಗಳ ಅಪರ ನಿಬಂಧಕರು, (ಪತ್ತು), (ಕೈಗಾರಿಕೆ ಮತ್ತು ಹೈನುಗಾರಿಕೆ) (ವಸತಿ ಮತ್ತು ಇತರೆ), (ಬಳಕೆ ಮತ್ತು ಮಾರಾಟ), ಸಹಕಾರ ಸಂಘಗಳ ನಿಬಂಧಕರ ಕಛೇರಿ, ಬೆಂಗಳೂರು
4. ಸಹಕಾರ ಸಂಘಗಳ ಜಂಟಿ ನಿಬಂಧಕರು, (ಆಡಳಿತ ಮತ್ತು ಅಭಿವೃದ್ಧಿ), (ಪಟ್ಟಣ ಬ್ಯಾಂಕುಗಳು), (ಐಸಿಡಿಪಿ), (ಕಾನೂನುಕೋಶ), ಕೇಂದ್ರ ಕಛೇರಿ, ಬೆಂಗಳೂರು
5. ಎಲ್ಲಾ ಪ್ರಾಂತೀಯ ಸಹಕಾರ ಸಂಘಗಳ ಜಂಟಿ ನಿಬಂಧಕರುಗಳಿಗೆ
6. ಎಲ್ಲಾ ಉಪವಿಭಾಗೀಯ ಸಹಕಾರ ಸಂಘಗಳ ಸಹಾಯಕ ನಿಬಂಧಕರುಗಳಿಗೆ
7. ರಾಜ್ಯಮಟ್ಟದ ಎಲ್ಲಾ ಮಹಾಮಂಡಳಿ/ ಅಪೆಕ್ಸ್ ಸಹಕಾರ ಸಂಘಗಳ ವ್ಯವಸ್ಥಾಪಕ ನಿರ್ದೇಶಕರುಗಳಿಗೆ
8. ಕಛೇರಿ ಆದೇಶ /ರಕ್ಷಾ ಕಡತ.

# <u>ಆಯುಕ್ತರು, ಸಹಕಾರ ಚುನಾವಣಾ ಆಯೋಗ, ಬೆಂಗಳೂರು ರವರ ಆದೇಶ ಸಂಖ್ಯೆ:ಸಚುಆ/30/ಜಿಚುಆನೇ-2014/ಪ್ರಾ.ಸಂ/2013, ದಿನಾಂಕ:17.10.2013ಕ್ಕೆ</u>

## <u>ಅನುಬಂಧ</u>

1. ಸಹಕಾರ ಸಂಘಗಳು / ಸಹಕಾರಿಗಳ ಮಂಡಳಿಗಳ ಸಾಮಾನ್ಯ ಚುನಾವಣೆಯನ್ನು ಮತ್ತು ತತ್ಪರಿಣಾಮದ ಪದಾಧಿಕಾರಿಗಳ ಚುನಾವಣೆಗಳನ್ನು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959, ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960, ಸಹಕಾರಿಗಳಿಗೆ ಸಂಬಂಧಿಸಿದಂತೆ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ರ ಅವಕಾಶಗಳು, ಸಂಘಗಳ /ಸಹಕಾರಿಗಳ ನೋಂದಾಯಿತ ಉಪವಿಧಿಗಳನ್ವಯ ಹಾಗೂ ಸಹಕಾರ ಚುನಾವಣಾ ಆಯೋಗದ ನಿರ್ದೇಶನ / ಮಾರ್ಗಸೂಚಿಗಳನ್ವಯ ನಡೆಸುವ ಬಗ್ಗೆ ಜಿಲ್ಲಾ ಚುನಾವಣಾಧಿಕಾರಿಗಳು ಅಗತ್ಯ ಕ್ರಮವಿಡತಕ್ಕದ್ದಾಗಿರುತ್ತದೆ.

2. ಕರ್ನಾಟಕ ಸರ್ಕಾರವು ಅಧಿಸೂಚನೆ ಸಂಖ್ಯೆ:ಸಿಒ/15/ಸಿಎಲ್‌ಎಂ/2013, ಬೆಂಗಳೂರು ದಿನಾಂಕ:19.09.2013 ರಂತೆ, ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004ಕ್ಕೆ ತಿದ್ದುಪಡಿ ತಂದಿದ್ದು, ಅದರಂತೆ ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ನಿಯಮಗಳು 2013 ಅನ್ನು ದಿನಾಂಕ:19.09.2013 ರಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ರಾಜ್ಯ ಪತ್ರಿಕೆಯಲ್ಲಿ ಅಧಿಕೃತವಾಗಿ ಪ್ರಕಟಿಸಿದ್ದು ಅಂದಿನಿಂದ ಜಾರಿಗೆ ಬಂದಿರುತ್ತದೆ. ಸೌಹಾರ್ದ ಸಹಕಾರಿಗಳ ಮಂಡಲಿ ಚುನಾವಣೆಗೆ ಸಂಬಂಧಿಸಿದಂತೆ ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ನಿಯಮಗಳು, 2013 ಅನ್ನು ಗಮನದಲ್ಲಿಟ್ಟುಕೊಂಡು ಕ್ರಮವಿಡತಕ್ಕದ್ದು.

3. ಸಹಕಾರ ಚುನಾವಣಾ ಆಯೋಗವು ಚುನಾವಣೆಗಳನ್ನು /ಪದಾಧಿಕಾರಿಗಳ ಚುನಾವಣೆಯನ್ನು ನಡೆಸುವ ಸಂಬಂಧವಾಗಿ ಈಗಾಗಲೇ ಹಲವಾರು / ಅಧಿಸೂಚನೆ / ಆದೇಶ ಮತ್ತು ಸುತ್ತೋಲೆಗಳನ್ನು ಹೊರಡಿಸಿದ್ದು ಈಗಾಗಲೇ ಪತ್ರ ಮುಖೇನಾ/ ಇ-ಮೇಲ್ ಮೂಲಕ ಎಲ್ಲಾ ಅಧಿಕಾರಿಗಳನ್ನು ಕಳುಹಿಸಲಾಗಿದೆ ಆಯೋಗದ ವೆಬ್‌ಸೈಟ್ ಗಮನಿಸುವುದರಿಂದ ಇದನ್ನು ಪಡೆಯಬಹುದಾಗಿದೆ.

4. ಆಯೋಗವು ಈ ಹಿಂದೆ 2013ನೇ ಮಾರ್ಚ್ ಮತ್ತು ಏಪ್ರಿಲ್ 2013ಕ್ಕೆ ಬಾಕಿ ಇದ್ದ ಮಂಡಲಿ ಚುನಾವಣೆಗಳನ್ನು ನಡೆಸುವ ಸಂಬಂಧ ಸಹಕಾರ ಸಂಘಗಳ ಉಪನಿಬಂಧಕರನ್ನು ಜಿಲ್ಲಾ ಚುನಾವಣಾಧಿಕಾರಿಯನ್ನಾಗಿ ನೇಮಿಸಿ ಹೊರಡಿಸಿದ ಆದೇಶ ಸಂಖ್ಯೆ:ಸಚುಆ/ಚುಅ/16/2013-14, ದಿನಾಂಕ:03.07.2013ರ ಅನುಬಂಧದಲ್ಲಿ ನೀಡಲಾದ ಮಾರ್ಗಸೂಚಿಗಳು ಪ್ರಸ್ತುತ ಆದೇಶಕ್ಕೂ ಅನ್ವಯವಾಗತಕ್ಕದ್ದಾಗಿದ್ದು, ಇದನ್ನು ಗಮನಿಸುವುದು ಈ ಸಂಬಂಧ ಆಯೋಗವು ಸಮ ಸಂಖ್ಯೆ ಪತ್ರ ದಿನಾಂಕ:10.07.2013ರಲ್ಲಿ ತಿದ್ದುಪಡಿ / ಸ್ಪಷ್ಟೀಕರಣ ನೀಡಿದ್ದು ಅದನ್ನು ಗಮನಿಸುವುದು.

5. ಸದಸ್ಯರ ಮತದ ಬಗ್ಗೆ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 20ರಲ್ಲಿ ವಿವರಿಸಿದೆ ಅಲ್ಲದೇ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997, ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960, ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ನಿಯಮಗಳು, 2013 ಹಾಗೂ ಸಂಘದ /ಸಹಕಾರಿಯ ಉಪವಿಧಿಗಳನ್ನು ಗಮನಿಸತಕ್ಕದ್ದಾಗಿದೆ.

ಸಹಕಾರ ಚುನಾವಣಾ ಆಯೋಗ
ಆಯುಕ್ತರು
ಬೆಂಗಳೂರು

6. ಸಹಕಾರ ಸಂಘದ /ಸಹಕಾರಿಯ ಸದಸ್ಯತ್ವ ಮತದಾನದ ಹಕ್ಕು ಸಾಧಿಸುವ ಸಂಬಂಧ ಯಾವುದೇ ನ್ಯಾಯಾಲಯದಲ್ಲಿ ವಿವಾದ /ವ್ಯಾಜ್ಯಗಳಿದ್ದು, ನ್ಯಾಯಾಲಯದಿಂದ ಯಾವುದೇ ಮಧ್ಯಂತರ ಆದೇಶಗಳಿದ್ದಲ್ಲಿ ಆ ಬಗ್ಗೆ ಗಮನಿಸಿ ಅಗತ್ಯ ಕ್ರಮವಿಡವುದು ವಿವಾದಗಳು ಇತ್ಯರ್ಥವಾಗಿದ್ದಲ್ಲಿ ನ್ಯಾಯಾಲಯದ ಆದೇಶದಂತೆ ಸಂಬಂಧಿಸಿದ ಸಂಘವು ಅಗತ್ಯ ಕ್ರಮವಿಟ್ಟಿರುವ ಬಗ್ಗೆ ಗಮನಿಸುವುದು.

7. ಚುನಾವಣೆಗಳಿಗಾಗಿ ಮತದಾರರ ಪಟ್ಟಿಗಳನ್ನು ತಯಾರಿಸುವುದಕ್ಕಾಗಿ ಮತ್ತು ಚುನಾವಣೆಗಳನ್ನು ನಡೆಸುವುದಕ್ಕಾಗಿ ತಗಲುವ ವೆಚ್ಚವನ್ನು ಸಂಬಂಧಿಸಿದ ಸಂಘಗಳೇ /ಸಹಕಾರಿಗಳೇ ಭರಿಸತಕ್ಕದ್ದಾಗಿದೆ. [ಅಧಿನಿಯಮ ಪ್ರಕರಣ 39ಎಎ(14)]

8. ಮತದಾರರ ಪಟ್ಟಿಯನ್ನು ಜಿಲ್ಲಾ ಚುನಾವಣಾಧಿಕಾರಿಯು ಸಿದ್ದಪಡಿಸುವ ಸಂಬಂಧ ಸರಿಯಾದ ಮಾಹಿತಿ / ದಾಖಲೆಯನ್ನು ಒದಗಿಸುವ ಜವಾಬ್ದಾರಿ ಸಂಬಂಧಿಸಿದ ಸಹಕಾರ ಸಂಘ / ಸಹಕಾರಿಯದ್ದಾಗಿರುತ್ತದೆ. [ಅಧಿನಿಯಮ ಪ್ರಕರಣ 39ಎಎ(15)] [ನಿಯಮ 13-ಡಿ(4)]

----2

9. ಸಹಕಾರ ಸಂಘದ / ಸಹಕಾರಿಯ ಮತದಾನದ ಹಕ್ಕುಳ್ಳ ಮತದಾರರ ಕರಡು ಪಟ್ಟಿ, ಸುಸ್ತಿದಾರರ ಕರಡು ಪಟ್ಟಿ , ಮತದಾನಕ್ಕೆ ಅರ್ಹತೆ ಹೊಂದಿರದ ಇತರೆ ಸದಸ್ಯರ ಪಟ್ಟಿ (ಕಾರಣಗಳನ್ನು ನಮೂದಿಸಿ) ಹಾಗೂ ಸುಸ್ತಿಯಾಗುವವರ ಕರಡು ಪಟ್ಟಿಯನ್ನು ಸಿದ್ದಪಡಿಸುವ ಜವಾಬ್ದಾರಿ ಪ್ರತಿ ಸಂಘದ /ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕನದ್ದಾಗಿರುತ್ತದೆ. ಈ ರೀತಿಯ ಪಟ್ಟಿಗಳನ್ನು ಚುನಾವಣಾ ದಿನಾಂಕಕ್ಕೆ ಕನಿಷ್ಟ 60 ದಿವಸಗಳು ಮುಂಚಿತವಾಗಿ ಜಿಲ್ಲಾ ಚುನಾವಣಾಧಿಕಾರಿಗಳಿಗೆ ದಾಖಲಾತಿಗಳ ಸಹಿತ ಸಲ್ಲಿಸತಕ್ಕದ್ದು. ಜಿಲ್ಲಾ ಚುನಾವಣಾಧಿಕಾರಿಯು ಸಂಬಂಧಿಸಿದ ಸಂಘಗಳು/ ಸಹಕಾರಿಗಳು ಸಲ್ಲಿಸುವ ಮೇಲ್ಕಂಡ ಪಟ್ಟಿಗಳನ್ನು ಪರಿಶೀಲಿಸಿ ಸಿದ್ದಪಡಿಸುವುದು ಮತ್ತು ಅಧಿನಿಯಮ /ನಿಯಮಗಳನ್ವಯ ಅಗತ್ಯ ಕ್ರಮವಿಡತಕ್ಕದ್ದು ಈ ಸಂಬಂಧ ಜಿಲ್ಲಾ ಚುನಾವಣಾಧಿಕಾರಿಯು ಅವರಿಗೆ ನೆರವಾಗಲು ಮೇಲ್ವಿಚಾರಣ ತಂಡವನ್ನು ರಚಿಸಬಹುದಾಗಿದೆ.

10. ಪ್ರತಿಯೊಂದು ಸಹಕಾರ ಸಂಘದ /ಸಹಕಾರಿಯ ಮಂಡಲಿಯೂ ಸಹಕಾರ ಚುನಾವಣಾ ಆಯೋಗವು ಸುಗಮವಾಗಿ ಮತದಾರರ ಪಟ್ಟಿಗಳನ್ನು ತಯಾರಿಸುವುದಕ್ಕೆ ಮತ್ತು ಚುನಾವಣೆಗಳನ್ನು ನಡೆಸುವುದಕ್ಕೆ ಅವಶ್ಯಕವಾದ ಎಲ್ಲಾ ನೆರವು, ಸಹಾಯ ಮತ್ತು ಸಹಕಾರವನ್ನು ನೀಡತಕ್ಕದ್ದು.

11. ಮತದಾರರ ಪಟ್ಟಿಯನ್ನು ಸಂಘದ ಬೈಲಾದಲ್ಲಿ ಮತದಾರರ ಪ್ರತ್ಯೇಕ ಕ್ಷೇತ್ರಗಳಿದ್ದಲ್ಲಿ ಕ್ಷೇತ್ರವಾರು ಸಿದ್ದಪಡಿಸತಕ್ಕದ್ದು. ಮತದಾರರ ಪಟ್ಟಿಯಲ್ಲಿ ಸದಸ್ಯರ ಹೆಸರು / ಸದಸ್ಯರ ತಂದೆ /ತಾಯಿ ಹೆಸರು ಅಥವಾ ಪತಿಯ ಹೆಸರು, ವಿಳಾಸ, ಸದಸ್ಯತ್ವ /ಪ್ರವೇಶತ್ವ ಸಂಖ್ಯೆ ಗುರುತಿನ ಕಾರ್ಡ್ ನೀಡಿದ್ದಲ್ಲಿ ಅದರ ಸಂಖ್ಯೆಯನ್ನು ತಪ್ಪದೇ ನಮೂದಿಸತಕ್ಕದ್ದು.

12. ಅಂತಿಮ ಮತದಾರರ ಪಟ್ಟಿಯು ಪ್ರಾಥಮಿಕ ಸಹಕಾರ ಸಂಘ /ಸಹಕಾರಿಯ ಸಂಬಂಧದಲ್ಲಿ ಮತದಾನದ ಹಕ್ಕುಳ್ಳ ಎಲ್ಲಾ ಬಿಡಿ ಸದಸ್ಯರ ಪಟ್ಟಿಯಾಗಿರುತ್ತದೆ. ಪ್ರತಿ ಸಹಕಾರ ಸಂಘವು /ಸಹಕಾರಿಯು ಅಂಥ ಮತದಾರರ ಪಟ್ಟಿಯ ಪ್ರತಿಯನ್ನು ಸಂಘದ ಸಹಕಾರಿಯ ಕಛೇರಿಯಲ್ಲಿ ಮತ್ತು ಜಿಲ್ಲಾ ಚುನಾವಣಾಧಿಕಾರಿಗಳ ಕಛೇರಿಯಲ್ಲಿ ವೀಕ್ಷಣೆಗೆ ಮುಕ್ತಾಯವಾಗಿಟ್ಟಿರತಕ್ಕದ್ದು.

13. ಸಹಕಾರ ಸಂಘಗಳ ಆಡಳಿತ ಮಂಡಳಿಗೆ /ಪದಾಧಿಕಾರಿಗಳ ಸ್ಥಾನಗಳಿಗೆ ಚುನಾವಣೆಯನ್ನು ನಡೆಸುವ ಸಂಬಂಧ ಜಿಲ್ಲಾ ಚುನಾವಣಾಧಿಕಾರಿಯು ಕಾನೂನಿಗೆ ಅನುಗುಣವಾಗಿ ಕಾರ್ಯನಿರ್ವಹಿಸುವ ಸಂಬಂಧ ಆಯೋಗವು ಪತ್ರ ಸಂಖ್ಯೆ: ಸಚುಆ/ಚುನಾವಣೆ/15/2013-14, ದಿನಾಂಕ:26.07.2013ರಲ್ಲಿ ಈಗಾಗಲೇ ಮಾರ್ಗಸೂಚಿಗಳನ್ನು ನೀಡಿದೆ.

14. ಸೌಹಾರ್ದ ಸಹಕಾರಿಗಳ ಸಂಬಂಧ ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ನಿಯಮಗಳು 2013ರ ದಿನಾಂಕ:19.09.2013 ರಿಂದ ಸರ್ಕಾರವು ರಾಜ್ಯ ಪತ್ರದಲ್ಲಿ ಪ್ರಕಟಗೊಳಿಸುವುದರ ಮುಖಾಂತರ ಜಾರಿಗೊಳಿಸಿದ್ದು, ನಿಯಮ 5, 5ಎ ನಿಂದ 5ಜೆಡ್ ಹಾಗೂ ನಿಯಮ 5ಎಎ ನಿಂದ 5ಎ.ಕೆ ಯನ್ನು ಹಾಗೂ 6, 6ಹೆಚ್, 6ಐ ಗಳನ್ನು ಗಮನಿಸಬಹುದಾಗಿದೆ.

15. ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ನಿಯಮಗಳು 2013ಕ್ಕೆ ಅನ್ವಯಿಸುವಂತೆ ವಿವಿಧ ನಿಯಮಗಳಿಗೆ ಅನುಗುಣವಾಗಿ ನಿರ್ದಿಷ್ಟವಾದ ನಮೂನೆಗಳಿದ್ದು ಅದರಂತೆ ಜಿಲ್ಲಾ ಚುನಾವಣಾಧಿಕಾರಿ /ರಿಟರ್ನಿಂಗ್ ಆಫೀಸರ್ಸ್ ವಿವರಗಳನ್ನು ಭರ್ತಿ ಮಾಡಿ ಕ್ರಮವಿಡತಕ್ಕದ್ದಾಗಿದೆ.

16. ಜಿಲ್ಲಾ ಚುನಾವಣಾಧಿಕಾರಿಗಳು ಅಧಿನಿಯಮ / ನಿಯಮಗಳನ್ವಯ ಕೈಗೊಳ್ಳುವ ಕ್ರಮಗಳು ಮುಕ್ತ ಹಾಗೂ ಪಾರದರ್ಶಕತೆಯನ್ನು ಹೊಂದಿರಬೇಕಾಗಿದ್ದು ಮಾಹಿತಿ ಹಕ್ಕು ಅಧಿನಿಯಮದಡಿ ಯಾವುದೇ ಅರ್ಜಿದಾರರಿಗೆ, ಸದರಿ ಅಧಿಕಾರಿಗಳು ಹೊರಡಿಸುವ ಆದೇಶ /ಅಧಿಸೂಚನೆ / ಪತ್ರ ವ್ಯವಹಾರದ ಪ್ರತಿಯನ್ನು ಸದರಿ ಅಧಿನಿಯಮದಡಿ ನೀಡಬೇಕಾಗಿರುತ್ತದೆ ಈ ಹಿನ್ನೆಲೆಯಲ್ಲಿ ಜಿಲ್ಲಾ ಚುನಾವಣಾಧಿಕಾರಿಗಳು ಹೆಚ್ಚಿನ ಎಚ್ಚರ ವಹಿಸಿ ಕಾನೂನಿನಗನುಗುಣವಾಗಿ ಅಗತ್ಯ ಕ್ರಮವಿಡಲು ಸೂಚಿಸಿದೆ.

ಸಹಕಾರ ಚುನಾವಣಾ ಆಯೋಗ
ಆಯುಕ್ತರು
ಬೆಂಗಳೂರು

(ಎನ್.ಸಿ. ಮುನಿಯಪ್ಪ)
ಸಹಕಾರ ಚುನಾವಣಾ ಆಯುಕ್ತರು
ಕರ್ನಾಟಕ ರಾಜ್ಯ, ಬೆಂಗಳೂರು